**ಶರದ ಸೌಕೂರ**

**‘ರಾವ್‌ಬೈಲ್’ ಎಂದೇ ಪ್ರಸಿದ್ಧರಾಗಿದ್ದ ಪ್ರಭಾಕರ ರಾವ್ ಬೈಲಂಗಡಿ (1937-2018) ಇತ್ತೀಚೆಗೆ ನಿಧನರಾದರು. ಕನ್ನಡದ ಈ ವಿಶಿಷ್ಟ ಕಲಾವಿದನ ಕಲೆ ಮತ್ತು ವ್ಯಕ್ತಿತ್ವದ ಚಿತ್ರ ಇಲ್ಲಿದೆ**

## ತುಂಟ ಹಕ್ಕಿ

ಎಪ್ಪತ್ತರ ದಶಕದಲ್ಲಿ ಬೆಳಗು 8.15ಕ್ಕೆ ಮುಂಬಯಿಯ ‘ಅಂಧೇರಿ’ ಉಪನಗರದಿಂದ ಆರಂಭವಾಗುತ್ತಿದ್ದ ಲೋಕಲ್ ರೈಲಿನಲ್ಲಿ ಈಗಿನಷ್ಟು ನೂಕು ನುಗ್ಗಲು ಇರುತ್ತಿರಲಿಲ್ಲ. ಅದರ ಒಂದು ನಿರ್ದಿಷ್ಟ ಕಂಪಾರ್ಟ್‌ಮೆಂಟಿನಲ್ಲಿ ಪ್ರತಿದಿನವೆಂಬಂತೆ ಒಬ್ಬ ವಿಲಕ್ಷಣ ವ್ಯಕ್ತಿಯ ದರ್ಶನವಾಗುತ್ತಿತ್ತು. ಗಾಳಿಗೆ ಹಾರಾಡುವ ಕೂದಲ ನಡುವೆ ಬೈತಲೆತೆಗೆದ ಅಲೆ ಅಲೆ ಕೇಶರಾಶಿ, ಕನ್ನಡಕದೊಳಗಿನಿಂದ ನಗುತ್ತ ಆಪ್ತವಾಗಿ ಇಣುಕುವ ತೀಕ್ಷ್ಣ ಕಣ್ಣುಗಳು, ಚುಂಚಿನಂಥ ಮೂಗಿನಡಿಯಿಂದ ಇಳಿಬಿದ್ದು ತುದಿಗಳಲ್ಲಿ ತುಸು ಮೇಲಕ್ಕೆ ಚಿಮ್ಮುವ ಮೀಸೆಗಳು, ಟ್ರಿಮ್ ಮಾಡಿದ ಗಡ್ಡ, ನಡಿಗೆಯಲ್ಲೊಂದು ಬಗೆಯ ಲಯಬದ್ಧ ಚುರುಕುತನ. ಫಕ್ಕನೆ ನೋಡಿದರೆ ತುಂಟ ಹಕ್ಕಿಯೊಂದನ್ನು ನೋಡಿದಂತಾಗುತ್ತಿತ್ತು. ಅವರೇ ‘ರಾವ್‌ಬೈಲ್’.

ರೈಲಿನಲ್ಲಿ ಅವರಿಗಾಗಿ ಕಾಯುವ ಸಹಪ್ರಯಾಣಿಕರ ಗುಂಪೊಂದು ಇರುತ್ತಿತ್ತು. ಅವರಿಗಾಗಿ ಜಾಗಹಿಡಿದು ‘ಯೇ ರಾವ್ ಅಭೀತಕ್ ಆಯಾ ನಹೀಂ. ಗಾಡಿ ನಿಕಲ್ ಜಾಯೇಗಾ’ ಎಂದು ಚಡಪಡಿಸುವ ಮಿತ್ರರಿದ್ದರು. ರಾವ್‌ಬೈಲ್ ಬಂದವರೇ ಏನಾದರೊಂದು ಕಿತಾಪತಿಯಲ್ಲಿ ತೊಡಗುತ್ತಿದ್ದರು. ಕೀಟಲೆ, ಕುಶಾಲು, ಜೋಕು, ನಡುನಡುವೆ ಭೀಮಸೇನ ಜೋಶಿ, ಗಂಗೂಬಾಯಿಯರ ಧ್ವನಿಗಳ ಅಣಕ, ಮೂಗಿನಿಂದ ಹೊರಡಿಸುವ ಶಹನಾಯಿ ಸ್ವರಗಳ ನಡುವೆ ಚರ್ಚ್‌ಗೇಟ್ ಬಂದದ್ದೇ ಗೊತ್ತಾಗುತ್ತಿರಲಿಲ್ಲ. ಕೆಲವೊಮ್ಮೆ ಎದುರಿಗೆ ಕೂತ ಪ್ರವಾಸಿ ತೂಕಡಿಸಿ ಸಮಾಧಿಸ್ಥನಾಗಲು ತೊಡಗಿದ್ದರೆ ಅವನ ಸ್ಕೆಚ್ ತೆಗೆಯಲು ಮುಂದಾಗುತ್ತಿದ್ದರು. ಹರಟೆಯಲ್ಲಿ ಸಂಗೀತ, ಸಿನಿಮಾ, ಪುಸ್ತಕ, ಕ್ರಿಕೆಟ್‌ಗಳೆಲ್ಲ ನುಸುಳುತ್ತಿದ್ದವು. ಒಟ್ಟಿನಲ್ಲಿ ಅವರ ಕಂಪನಿಯಲ್ಲಿ ನೀರಸ ಕ್ಷಣಗಳೆಂಬುವೇ ಇರುತ್ತಿರಲಿಲ್ಲ.

## ಆಕಸ್ಮಿಕ ಕಲಾವಿದ

1937ರಲ್ಲಿ ಕಾಸರಗೋಡಿನಲ್ಲಿ ಹುಟ್ಟಿದ ಪ್ರಭಾಕರ ಬೈಲಂಗಡಿಯವರು